**DIRECTORATE OF INDUSTRIES AND COMMERCE**
*No.49, 2nd Floor, South Block*
*Khanija Bhavan, Race Course Road,*
*Bangalore – 560001*
☎ : 22386798
Fax : 22389909

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯ
ನಂ.49, 2ನೇ ಮಹಡಿ, ಸೌತ್ ಬ್ಲಾಕ್,
ಖನಿಜ ಭವನ, ರೇಸ್ ಕೋರ್ಸ್ ರಸ್ತೆ,
ಬೆಂಗಳೂರು – 560 001
☎:22386798
ಫ್ಯಾಕ್ಸ್:22389909


ಸಂ:ಕೈವಾಇ/ಕೈಅ/ಐ3/2009-14/ಕೈನೀ/ಅಧಿಸೂಚನೆ/08-09/2010-11. ದಿನಾಂಕ:27-06-2011.

28 JUN 2011

**: ಸುತ್ತೋಲೆ :**

ವಿಷಯ: **2009-14ರ ಕೈಗಾರಿಕಾ ನೀತಿಯಂತೆ ವ್ಯಾಟ್ ಲೋನ್ ನೀಡಲು ಹೊರತಂದಿರುವ ಪರಿಷ್ಕೃತ ಮಾರ್ಗಸೂಚಿಯಲ್ಲಿ ತಿದ್ದುಪಡಿ ತರುವ ಬಗ್ಗೆ.**

ಉಲ್ಲೇಖ:1) ಸರ್ಕಾರದ ಆದೇಶ ಸಂಖ್ಯೆ ಸಿಐ/233/ಎಸ್.ಪಿ.ಐ/2008, ದಿನಾಂಕ:28.02.2009.
2) ದಿನಾಂಕ: 22-2-2010 ರಂದು ನಡೆದ 99 ನೇ ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಭೆಯ ಅನುಮೋದನೆಯಂತೆ ಪರಿಷ್ಕೃತ ಮಾರ್ಗಸೂಚಿ
3) ದಿನಾಂಕ:20.06.2011 ರಂದು ನಡೆದ 104 ನೇ ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಭೆಯ ನಡವಳಿಗಳು.

2009-14ರ ಕೈಗಾರಿಕಾ ನೀತಿಯಂತೆ ವ್ಯಾಟ್ ಲೋನ್ ನೀಡಲು ಹೊರತಂದಿರುವ ಪ್ರಸಕ್ತ ಮಾರ್ಗಸೂಚಿಯಲ್ಲಿ, ವಿಸ್ತರಣೆ / ಆಧುನೀಕರಣ/ ವೈವಿಧ್ಯೀಕರಣ ಯೋಜನೆಯಡಿ ಬಂಡವಾಳ ಹೂಡುವ ಕೈಗಾರಿಕೆಗಳಿಗೆ ಯಾವ ಪ್ರಮಾಣದಲ್ಲಿ ವ್ಯಾಟ್ ಲೋನ್ ಮಂಜೂರು ಮಾಡಬೇಕು ಹಾಗೂ ಯಾವುದೇ ಘಟಕ ಸಾಲ ಪಡೆಯುವ ಮೊದಲಿಗೆ ಬ್ಯಾಂಕ್ ಗ್ಯಾರಂಟಿ ನೀಡಲು ಮುಂದೆ ಬಂದಲ್ಲಿ ಸಾಲ ಮಂಜೂರು ಮಾಡಿ ಬಿಡುಗಡೆ ಮಾಡುವ ಸಂದರ್ಭದಲ್ಲಿ ಘಟಕದ ವತಿಯಿಂದ 1) Loan Agreement (2) Deed of Guarantee (3) Mortgage Deed (4) Personal Guarantee from all the Directors ಗಳನ್ನು ಪಡೆಯುವ ಅವಶ್ಯಕತೆ ಬಗ್ಗೆ 104 ನೇ ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿದ್ದು ಕೆಳಕಂಡಂತೆ ಕ್ರಮವಹಿಸಲು ತೀರ್ಮಾನಿಸಲಾಗಿರುತ್ತದೆ.

ಅ) ವಿಸ್ತರಣೆ / ಆಧುನೀಕರಣ/ ವೈವಿಧ್ಯೀಕರಣ ಯೋಜನೆಯಡಿ ಬಂಡವಾಳ ಹೂಡುವ ಕೈಗಾರಿಕೆಗಳಿಗೆ, ಈ ಹಿಂದೆ ಮಾರಾಟ ತೆರಿಗೆ ಸೌಲಭ್ಯಗಳ ಬಗ್ಗೆ ಆರ್ಥಿಕ ಇಲಾಖೆಯು ಹೊರಡಿಸಿದ್ದ ಮಾರ್ಗಸೂಚಿಗಳಂತೆ, ಹೆಚ್ಚುವರಿ ಉತ್ಪಾದನೆಗೆ ಮಾತ್ರ ಸೀಮಿತವಾಗುವಂತೆ, ಸಾಲ ಸೌಲಭ್ಯ ಲಭ್ಯವಿರುವುದಾಗಿ ಸ್ಪಷ್ಟೀಕರಿಸಲಾಗಿದೆ.

ಆ) ಯಾವುದೇ ಘಟಕ ಸಾಲ ಪಡೆಯುವ ಮೊದಲಿಗೆ ಬ್ಯಾಂಕ್ ಗ್ಯಾರಂಟಿ ನೀಡಲು ಮುಂದೆ ಬಂದಲ್ಲಿ ಸಾಲ ಮಂಜೂರು ಮಾಡಿ ಬಿಡುಗಡೆ ಮಾಡುವ ಸಂದರ್ಭದಲ್ಲಿ ಘಟಕದ ವತಿಯಿಂದ Loan Agreement, Deed of Guarantee, Mortgage Deed ಮತ್ತು Personal Guarantee from all the Directors ಬದಲು 1) Loan Agreement (2) Consent from Financial Institution / Banks for establishing second charge (3) Bank Guarantee for the full Loan Period ಗಳನ್ನು ಪಡೆದು ಸಾಲ ಮಂಜೂರು / ಬಿಡುಗಡೆ ಮಾಡಬಹುದು. ಸಾಲ ಬಿಡುಗಡೆ ಮಾಡುವ ಮುನ್ನ ಸಂಬಂಧಿಸಿದ ಬ್ಯಾಂಕ್‌ಗೆ ನೋಂದಣಿ ಅಂಚೆ ಮುಖೇನ ಪತ್ರ ಬರೆದು ಅವರು ನೀಡಿರುವ ಬ್ಯಾಂಕ್ ಗ್ಯಾರಂಟಿಯ ಬಗ್ಗೆ ಸಂಬಂಧಪಟ್ಟ ಬ್ಯಾಂಕ್‌ನಿಂದ ಖಚಿತಪಡಿಸಿಕೊಂಡು, ಸಾಲ ಬಿಡುಗಡೆ ಮಾಡಲು ಹಾಗೂ ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಈ ರೀತಿಯ ಬ್ಯಾಂಕ್ ಗ್ಯಾರಂಟಿಗಳು ಚಾಲ್ತಿಯಲ್ಲಿರುವುದರ ಬಗ್ಗೆ ಬ್ಯಾಂಕ್‌ಗಳಿಂದ ಖಚಿತಪಡಿಸಿಕೊಳ್ಳಲು ತೀರ್ಮಾನಿಸಲಾಯಿತು.

..2..

ಮುಂದುವರೆದಂತೆ, ವ್ಯಾಟ್ ಲೋನ್‌ನನ್ನು ಕೈಗಾರಿಕಾ ಘಟಕದ ಉತ್ಪನ್ನವು ಅಂತಿಮವಾಗಿ ರಾಜ್ಯದಲ್ಲಿನ ಗ್ರಾಹಕರಿಗೆ ಮಾರಾಟವಾಗುವ ಮೌಲ್ಯದ ಮೇಲೆಯೇ ನಿರ್ಧರಿಸಬೇಕೆಂಬುದಾಗಿ ಆರ್ಥಿಕ ಇಲಾಖೆಯು ತಿಳಿಸಿದ್ದು, ಕೆಲವು ನಿರ್ದಿಷ್ಟ ಹೆಚ್ಚುವರಿ ಷರತ್ತುಗಳನ್ನು ಮಾರ್ಗಸೂಚಿಯಲ್ಲಿ ಅಳವಡಿಸುವುದು ಅವಶ್ಯಕವಿರುವುದಾಗಿ ತಿಳಿಸಿರುವುದರ ಬಗ್ಗೆಯೂ ಸಹ ಸಭೆಯು ಚರ್ಚಿಸಿದ್ದು, ಕೆಳಕಂಡ ಹೆಚ್ಚುವರಿ ಷರತ್ತುಗಳನ್ನು ಸಹ ಮಾರ್ಗಸೂಚಿಯ Loan eligibility certificate /Agreement ನಲ್ಲಿ ಅಳವಡಿಸುವಂತೆ ತೀರ್ಮಾನಿಸಲಾಯಿತು.

***The tax incentive by way of soft loan in lieu of VAT would be available only to the extent of final consumption in the State. Any production which is exported outside the State either by parent unit or its subsidiary or subsequent trader will not be eligible for the interest free loan. Following formulation can be considered in this regard.***

***"The loan would be equal to a prescribed percentage of the Eligible Gross VAT. The Eligible gross VAT shall be computed in the following manner"***

***For Sales made by the industrial unit to a final consumer within the State, the Gross VAT on this turnover shall be the eligible Gross VAT.***

***For sales by the industrial unit to other dealers within the State who in turn make inter-state sales or stock transfer, the buying dealer(s) would be eligible to claim ITC equivalent to the Gross VAT on this turnover. The Gross VAT pertaining to this turnover shall not be eligible for the loan incentive.***

***For sales made by the industrial unit to other dealers within the State who in turn make export sales, the buying dealers shall be eligible to claim ITC equivalent to the Gross VAT on this turnover. The Gross VAT on this turnover would not be eligible for the loan incentive.***

***The basic guiding principle shall be that the goods should be finally consumed in the state and only such turnovers should be reckoned to arrive at the eligible Gross VAT."***

***Further it was also resolved that all original loan documents shall be maintained at Directorate/ Joint director, DIC offices.***

ಮೇಲ್ಕಂಡಂತೆ, ವ್ಯಾಟ್ ಲೋನ್ ಮಂಜೂರಾತಿ ಸಂಬಂಧ ಅರ್ಜಿಗಳನ್ನು ಸ್ವೀಕರಿಸಿ ವ್ಯಾಟ್ ಲೋನ್ ಮಂಜೂರಾತಿ ನೀಡುವ ಸಂದರ್ಭದಲ್ಲಿ ಈಗಾಗಲೇ ಹೊರಡಿಸಿರುವ ಉಲ್ಲೇಖ(2)ರಲ್ಲಿನ ಪರಿಷ್ಕೃತ ಮಾರ್ಗಸೂಚಿಯಂತೆ ಹಾಗೂ ಮೇಲೆ ತಿಳಿಸಿರುವ ಹೆಚ್ಚುವರಿ ಷರತ್ತುಗಳನ್ನು Loan eligibility certificate /Agreement ನಲ್ಲಿ ಅಳವಡಿಸಲು ಈ ಮೂಲಕ ಸೂಚಿಸಿದೆ.

ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ
ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಬೆಂಗಳೂರು.

ಇವರಿಗೆ,
ಜಂಟಿ ನಿರ್ದೇಶಕರು,
ಜಿಲ್ಲಾ ಕೈಗಾರಿಕಾ ಕೇಂದ್ರ,
. . . . . . . . . . . ಜಿಲ್ಲೆ.

ಪ್ರತಿಯನ್ನು:
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ನಿರ್ದೇಶಕರು, ಕೃಷಿ ಮತ್ತು ಮಾರುಕಟ್ಟೆ ಇಲಾಖೆ, ಬೆಂಗಳೂರು.
4. ಅಪರ ನಿರ್ದೇಶಕರು(ವಿತ್ತ) / (ಎಂ.ಎಸ್.ಎಂ.ಇ) / (ಜಿಕೈಕೇ), ಕೇಂದ್ರ ಕಛೇರಿ, ಬೆಂಗಳೂರು.
5. ಅಧ್ಯಕ್ಷರು, ಎಫ್.ಕೆ.ಸಿ.ಸಿ.ಐ. ಬೆಂಗಳೂರು.
6. ಅಧ್ಯಕ್ಷರು, ಕಾಸಿಯಾ, ವೆಸ್ಟ್ ಆಫ್ ಕಾರ್ಡ್ ರೋಡ್, ವಿಜಯನಗರ, ಬೆಂಗಳೂರು.
7. ಕಂಪ್ಯೂಟರ್ ವಿಭಾಗ ರವರಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ಕಛೇರಿ ಪ್ರತಿ.